6-3-2023 22

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಉಮಾಶ್ರೀರವರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ಪ್ರಶ್ನೆ:** ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿ ಎರಡನೇ ಅತಿದೊಡ್ಡ ಹಿಂಡಲಗಾ ಜೈಲಿನ ಖೈದಿಗಳು ಜೈಲಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಲ್ಯಾಂಡ್‌ಲೈನ್ ಟು-ಜಿ ನೆಟ್ ವರ್ಕ್ ಬದಲಾಯಿಸಿ 5ಜಿ ನೆಟ್ ವರ್ಕ್ ಜಾಮರ್ ಅಳವಡಿಕೆ ಮಾಡಿದೆ. ತಾಂತ್ರಿಕವಾಗಿ ನಿಯಂತ್ರಣಕ್ಕೆ ಒಳಪಡಿಸಿದ ಈ ಒಂದು ಪ್ರಯತ್ನದಿಂದ ಜೈಲಿನ ಸುತ್ತಲಿನ ನಗರ ಪ್ರದೇಶದ ಜನರಿಗೂ, ಕೆಲವು ಗ್ರಾಮೀಣ ಪ್ರದೇಶದ ಜನರಿಗೂ ಕಛೇರಿಗಳಿಗೂ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಬಹಳಷ್ಟು ತೊಂದರೆಯಾಗುತ್ತಿದೆ. ಜೈಲಿನ ಒಳಗೆ ಖೈದಿಗಳು ಮೊಬೈಲ್ ಬಳಸಲು ನಿಷೇಧವಿದ್ದರೂ ಅವರ ಕೈಗೆ ಹೇಗೆ ಮೊಬೈಲ್ ಸಿಗುತ್ತದೆ. ನಿಷೇಧವಿದ್ದ ಮೇಲೆ ಜಾಮರ್ ಅಗತ್ಯವೇಕೆ. ಮೊಬೈಲ್ ಒಳಗಡೆ ಹೋಗದಂತೆ ತಡೆಯುವಲ್ಲಿ ಕಾರಾಗೃಹ ಸಿಬ್ಬಂಧಿ ವಿಫಲರಾಗಿದ್ದಾರೆ. ಅವರ ಮೇಲೆ ಶಿಸ್ತು ಕ್ರಮಕೈಗೊಳ್ಳಲ್ಲಿ ಎಂಬ ಸಾಲು ಸಾಲು ಪ್ರಶ್ನೆಗಳು ಸಾರ್ವಜನಿಕರಲ್ಲಿ ಮೂಡಿದೆ.

ಈ ಕಾರಣದಿಂದ ಜನರಿಗೆ ತೊಂದರೆ ಆಗದಂತೆ ತಜ್ಞರೊಂದಿಗೆ ಚರ್ಚಿಸಿ ಪರ್ಯಾಯವಾದ ವ್ಯವಸ್ಥೆಯನ್ನು ಅಳವಡಿಸುವುದು.

**ಉತ್ತರ :** 2022-23ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಕಾರಾಗೃಹಗಳಲ್ಲಿ ಮೊಬೈಲ್ ಬಳಕೆ ತಡೆಯಲು ಹಾಗೂ ಇನ್ನಿತರೇ ನಿಷೇಧಿತ ವಸ್ತುಗಳ ತಪಾಸಣೆ ಮಾಡಿ ಪತ್ತೆ ಹಚ್ಚಲು ಅತ್ಯಾಧುನಿಕ ಮಾದರಿಯ ಉಪಕರಣಗಳು ಮತ್ತು ಮೊಬೈಲ್ ಜಾಮರ್‌ಗಳನ್ನು ಅಳವಡಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 14 ಪಿಆರ್‌ಎ 2023, ದಿನಾಂಕ: 14.03.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಅದರನ್ವಯ, ಕೇಂದ್ರ ಕಾರಾಗೃಹಗಳಾದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ, ಮತ್ತು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್ ಉಪಕರಣಗಳನ್ನು ಭಾರತ ಸರ್ಕಾರದ ಅಂಗ ಸಂಸ್ಥೆಯಾದ TCIL ಸಂಸ್ಥೆಯಿಂದ ದುರಸ್ತಿ ಮತ್ತು ಮೇಲ್ದರ್ಜೆಗೆ ಹಾಗೂ 3 ವರ್ಷಗಳ ಸಮಗ್ರ ನಿರ್ವಹಣೆ (CAMC)ಗೆ ಕಾರ್ಯಾದೇಶ ನೀಡಲಾಗಿರುತ್ತದೆ.

| ಕ್ರ. ಸಂ. | ಕಾರಾಗೃಹದ ಹೆಸರು | ಜಾಮರ್‌ಗಳ ಸಂಖ್ಯೆ |
|---|---|---|
| 1 | ಕೇದ್ರ ಕಾರಾಗೃಹ, ಬೆಂಗಳೂರು | 19 ಸಂಖ್ಯೆ |
| 2 | ಕೇಂದ್ರ ಕಾರಾಗೃಹ, ಬೆಳಗಾವಿ | 10 ಸಂಖ್ಯೆ |
| 3 | ಕೇಂದ್ರ ಕಾರಾಗೃಹ, ಬಳ್ಳಾರಿ | 10 ಸಂಖ್ಯೆ |
| 4 | ಕೇಂದ್ರ ಕಾರಾಗೃಹ, ಧಾರವಾಡ | 08 ಸಂಖ್ಯೆ |
| 5 | ಕೇಂದ್ರ ಕಾರಾಗೃಹ, ಕಲಬುರ್ಗಿ | 10 ಸಂಖ್ಯೆ |
| 6 | ಕೇಂದ್ರ ಕಾರಾಗೃಹ, ಮೈಸೂರು | 04 ಸಂಖ್ಯೆ |
| 7 | ಜಿಲ್ಲಾ ಕಾರಾಗೃಹ, ಮಂಗಳೂರು | 05 ಸಂಖ್ಯೆ |

ರಾಜ್ಯದ ಕೇಂದ್ರ ಕಾರಾಗೃಹಗಳಾದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ, ಮತ್ತು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್‌ಗಳು 2ಜಿ ತಂತ್ರಜ್ಞಾನವನ್ನು ಒಳಗೊಂಡಿದ್ದು, ಎಲ್ಲಾ ಜಾಮರ್ ಗಳು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿದ್ದವು. ಕಾರಾಗೃಹಗಳ ಆಡಳಿತ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಸದರಿ 66 ಸಂಖ್ಯೆ ಜಾಮರ್‌ಗಳನ್ನು ದುರಸ್ಥಿ ಮತ್ತು ಮೇಲ್ದರ್ಜೆಗೇರಿಸಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 14 ಪಿಆರ್‌ಎ 2023, ದಿನಾಂಕ: 14.03.2024ರಲ್ಲಿ ಆದೇಶಿಸಿ ಅನುದಾನ ಬಿಡುಗಡೆಗೊಳಿಸಿರುತ್ತದೆ. ಅದರನ್ವಯ, ಬೆಂಗಳೂರು ಮತ್ತು ಬೆಳಗಾವಿ ಕೇಂದ್ರ ಕಾರಾಗೃಹಗಳಲ್ಲಿ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದ್ದು, ಇನ್ನುಳಿದ ಕಾರಾಗೃಹಗಳಲ್ಲಿನ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ಅದರಂತೆ, ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿನ 10 ಸಂಖ್ಯೆ ಮೊಬೈಲ್ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ Testing and Recalibration ಹಂತದಲ್ಲಿದ್ದು ಜಾಮರ್ ಅಳವಡಿಕೆಯಿಂದ ಉಂಟಾಗುವ ಸಾಧಕ-ಬಾಧಕಗಳನ್ನು ಪರಿಶೀಲಿಸಲಾಗುತ್ತಿದ್ದು, ಪರಿಶೀಲನಾ ಹಂತದಲ್ಲಿ ನೆಟ್‌ವರ್ಕ್ ಕುರಿತಂತೆ ಉಂಟಾಗುವ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಲು ಸಂಬಂಧಪಟ್ಟ ಸಂಸ್ಥೆಯವರಿಗೆ ಈಗಾಗಲೇ ಸೂಚಿಸಲಾಗಿದೆ.

ಮುಂದುವರೆದು, ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಮೊಬೈಲ್ ಜಾಮರ್ ಅನ್ನು ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಕೈಗೊಂಡಿರುವ M/s. Telecommunications Consultations India Limited ರವರಿಗೆ ಜಾಮರ್‌ಗಳ Frequency ಯನ್ನು Recalibration ಮಾಡಿ ಕಾರಾಗೃಹದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಮತ್ತು ಕಾರಾಗೃಹದ ಭದ್ರತೆಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳುವಂತೆ ಪತ್ರ ಮುಖೇನ ವ್ಯವಹರಿಸಲಾಗಿದೆ.

ಸಾರ್ವಜನಿಕರಿಗೆ ಮೊಬೈಲ್ ನೆಟ್‌ವರ್ಕ್ ಸಿಗದೇ ತೊಂದರೆ ಆಗುತ್ತಿರುವ ಬಗ್ಗೆ ಚರ್ಚಿಸಲು M/s. Telecommunications Consultations India Limited , ಎಲ್ಲಾ 04 Service Providers (Airtel, BSNL, VI and JIO) ಗಳ ಅಧಿಕಾರಿಗಳು ಮತ್ತು Department of Telecommunications (DOT) ಅಧಿಕಾರಿಗಳೊಂದಿಗೆ ದಿನಾಂಕ: 04.03.2025 ರಂದು ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಕಾರಾಗೃಹಗಳಲ್ಲಿ ಮೊಬೈಲ್ ಸಿಗ್ನಲ್ ದೊರೆಯದಂತೆ ಜಾಮರ್‌ಗಳು ಸಂಪೂರ್ಣ ಕಾರ್ಯಕ್ಷಮತೆ ಹೊಂದಿರಬೇಕು ಹಾಗೂ ಸಾರ್ವಜನಿಕರಿಗೆ ಜಾಮರ್‌ಗಳಿಂದಾಗಿ ತೊಂದರೆ ಉಂಟಾಗಬಾರದು ಎಂದು ಸಂಬಂಧಪಟ್ಟವರಿಗೆ ಸೂಚಿಸಲಾಗಿರುತ್ತದೆ.

ಸಂಖ್ಯೆ: ಹೆಚ್‌ಡಿ 73 ಪಿಆರ್‌ಎ 2025

**(ಡಾ: ಜಿ ಪರಮೇಶ್ವರ)**
ಗೃಹ ಸಚಿವರು